ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೆರಡನೆಯ ಅಧಿವೇಶನ

ಬುಧವಾರ, ದಿನಾಂಕ: 09ನೇ ಡಿಸೆಂಬರ್, 2020

ರೈತರಿಗೆ ಬೆಳೆ ವಿಮೆ ಪಾವತಿಸುವ ಬಗ್ಗೆ

ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-

251 (256) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2019ನೇ ಸಾಲಿನಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ರೈತರಿಗೆ ಬೆಳೆ ವಿಮೆಯನ್ನು ಪಾವತಿಸಲಾಗಿದೆ; ಪಾವತಿಸಲಾದ ಒಟ್ಟು ಮೊತ್ತವೆಷ್ಟು;

(ಆ) ಈ ಜಿಲ್ಲೆಗಳಲ್ಲಿ 2019ನೇ ಸಾಲಿನಲ್ಲಿ ಎಷ್ಟು ರೈತರಿಗೆ ಬೆಳೆ ವಿಮೆಯನ್ನು ಪಾವತಿಸಲಾಗಿದೆ ಹಾಗೂ ಪಾವತಿಸಲಾದ ಒಟ್ಟು ಮೊತ್ತವೆಷ್ಟು;

(ಇ) ವಿಮೆ ಕಂಪನಿಗಳು ರೈತರಿಗೆ ಬೆಳೆ ವಿಮೆ ಪಾವತಿಸುವಲ್ಲಿ ಆಗಿರುವ ವಿಳಂಬಕ್ಕೆ ಕಾರಣಗಳೇನು ಹಾಗೂ ರೈತರಿಗೆ ವಿಮೆ ಕಂಪನಿಗಳು ಪಾವತಿಸಬೇಕಾದ ಬೆಳೆ ವಿಮೆ ಪಾವತಿಸುವಂತೆ, ಸರ್ಕಾರ ವಿಮೆ ಕಂಪನಿಗಳಿಗೆ ನಿರ್ದೇಶನ ನೀಡುವುದೇ; ಇದಕ್ಕೆ ಬೇಕಾದ ಕಾಲಾವಕಾಶವೆಷ್ಟು?